# ಅಸಮ್ಮತಿಯ ಟಿಪ್ಪಣಿಗಳು

ನಾಗರಿಕ ಸಮಾಜ ಊಹಿಸಲಾರದ ಹಿಂಸೆಯ ರೂಪಗಳು ನಮ್ಮ ನಡುವೆ ನಡೆಯುತ್ತಲೇ ಇವೆ. ನಮ್ಮ ಸಂವಿಧಾನ, ನೆಲದ ಕಾನೂನು, ಮಾನವ ಸಮಾಜ ಒಂದೇ ಎಂದು ಹೇಳುವ ಸಂದರ್ಭದಲ್ಲೂ ಮನುಷ್ಯರು ಇಷ್ಟು ಕ್ರೌರ್ಯದಿಂದ ನಡೆದುಕೊಳ್ಳುತ್ತಿರುವುದು ಆತಂಕ ಹುಟ್ಟಿಸುತ್ತಿದೆ. ಇಂದಿನ ಸಮಾಜ ಇಷ್ಟೊಂದು ಬರ್ಬರ ಹಿಂಸೆಯನ್ನು ನೋಡುವಂತಾಗಿದೆ ಎನ್ನುವುದು ಹಾಗೂ ಇದಕ್ಕಾಗಿ ಯಾರನ್ನು ಹೊಣೆ ಮಾಡುವುದು? ಈ ಪ್ರಶ್ನೆ ಆಗಾಗ ಎದುರಾಗುತ್ತದೆ.

ನಮ್ಮ ಕಣ್ಣ ಮುಂದೆ ಎರಡು ಘಟನೆಗಳಿವೆ. ಒಂದನೆಯದು: ಒಂದು ಊರಿನ ಗ್ರಾಮದೇವತೆಯ ಜಾತ್ರೆಗೆ ಪಾಲು ಕೊಡದಿರುವ ಅಲ್ಲಿನ ಇಡೀ ದಲಿತ ಸಮುದಾಯವನ್ನು ಬಹಿಷ್ಕರಿಸುವುದು, ಇದೂ ಸಾಲದು ಎಂಬಂತೆ ಈ ಬಹಿಷ್ಕಾರದ ವಿಷಯವನ್ನು ಗ್ರಾಮದಲ್ಲಿ ಬಹಿಷ್ಕೃತ ದಲಿತನೊಬ್ಬನಿಂದಲೇ ತಮಟೆ ಹೊಡೆದು ಸಾರಿಸಿರುವುದು ಸಂವಿಧಾನ, ನೈತಿಕ ಮತ್ತು ಕಾನೂನಿನ ಭಯವಿಲ್ಲದೆ ಹಾಡಹಗಲಲ್ಲಿಯೇ ನಡೆದಿದೆ. ಹೀಗೆ ತಮ್ಮ ಸಮುದಾಯವನ್ನು ಗ್ರಾಮದೇವತೆಯ ಜಾತ್ರೆಗೆ ಬಹಿಷ್ಕರಿಸುವ ಸಂಗತಿಯನ್ನು ಗ್ರಾಮದಲ್ಲಿ ಸಾರಿಕ್ಕಿದ ಆ ದಲಿತ ವ್ಯಕ್ತಿಯ ಮನಸ್ಥಿತಿ ಆಗ ಏನಾಗಿರಬಹುದು! ಈ ರೀತಿ ಬಹಿಷ್ಕಾರ ಹಾಕಿದವರು ಮುಖ್ಯವಾಗಿ ಆ ಗ್ರಾಮದ ವಿದ್ಯಾವಂತರು ಎನ್ನುವುದು ಪತ್ರಿಕೆಗಳಲ್ಲಿ ಎದ್ದುಕಾಣುತ್ತಿತ್ತು. ಇದೇ ರೀತಿಯಾಗಿ ಗ್ರಾಮವೊಂದರಲ್ಲಿ ದಲಿತ ಸಮುದಾಯದವರು ಕುಡಿಯುವ ನೀರಿನ ಟ್ಯಾಂಕಿಗೆ ಮಲ ಬೆರೆಸಿದ ಘಟನೆ ವರದಿಯಾಗಿದೆ. ಸಾವಿರಾರು ವರ್ಷಗಳಿಂದಲೂ ಈ ಸಮಾಜದಲ್ಲಿ ದಲಿತ ಸಮುದಾಯದವರ ಮೇಲೆ ಯಾವ ಎಗ್ಗೂ ಇಲ್ಲದೆ ನಡೆಯುತ್ತಿರುವ ಹಿಂಸೆಯ ಬಹುಮಾದರಿಗಳು. ಅಸ್ಪೃಶ್ಯತೆಯ ಆಚರಣೆಯನ್ನು ಕುರಿತು ಕೆ.ಎಚ್. ರಂಗನಾಥ್ ಅವರು ಸಂದರ್ಶನವೊಂದರಲ್ಲಿ ಹೇಳಿರುವ ಮಾತು ಹೀಗಿವೆ: ‘ಅಸ್ಪೃಶ್ಯತೆ ಅಂದ್ರೆ ಏನೂಂತ ನಾನ್ಯಾಕೆ ಹೇಳ್ಬೇಕು? ಅಸ್ಪೃಶ್ಯತೇನ ಆಚರಣೆ ಮಾಡ್ತಾ ಇರೋರು ಹೇಳ್ಬೇಕು ಅಸ್ಪೃಶ್ಯತೆ ಅಂದ್ರೇನು ಅಂತ. ಅಸ್ಪೃಶ್ಯತೇನ ನಾನು ಆಚರಿಸದೆ ಇದ್ದಾಗ ನಾನೇನು ಹೇಳಕ್ಕಾಗುತ್ತೆ? ಗಾಯಗೊಂಡರ್ನ ಕೇಳೋದಕ್ಕಿಂತ, ಗಾಯ ಮಾಡಿದವರನ್ನ ಕೇಳಿ’ (ತಲಪರಿಗೆ).

ಎರಡನೆಯದು ಹೀಗಿದೆ: ಒಬ್ಬ ಯುವಕ ತನ್ನ ಪ್ರೇಯಸಿಯ ಬಾಯಿಗೆ ಜಿಲೆಟಿನ್ ಕಡ್ಡಿಗಳನ್ನು ಇಟ್ಟು ಸ್ಫೋಟಿಸಿ ಆಕೆಯನ್ನು ಯಾವುದೇ ಕರುಣೆ ಇಲ್ಲದೆ ಕೊಂದ ಘಟನೆ ಈಚೆಗೆ ನಡೆದಿದೆ. ಮಾನವ ಜನಾಂಗ ಊಹಿಸಲಾಗದಂಥ, ನರಕದಲ್ಲೂ ಇರದ ಕ್ರೌರ್ಯದ ಘಟನೆ ಇದು. ಇನ್ನೊಂದು ಗ್ರಾಮದಲ್ಲಿ ಶಾಲಾ ವಿದ್ಯಾರ್ಥಿಗಳು ಕುಡಿಯುವ ನೀರಿಗೆ ವಿಷ ಬೆರೆಸಿದ ಕ್ರೂರ ಘಟನೆ ವರದಿಯಾಗಿದೆ. ಮತ್ತೊಂದೆಡೆ ಈಶಾನ್ಯ ಭಾರತದ ರಾಜ್ಯವೊಂದರಲ್ಲಿ ಹಾಡಹಗಲೇ ಮಹಿಳೆಯೊಬ್ಬಳನ್ನು ಸಾರ್ವಜನಿಕವಾಗಿ ನಗ್ನಗೊಳಿಸಿ ಎಳೆದುಕೊಂಡು ಹೋಗುತ್ತಿರುವ ಒಂದು ಉನ್ಮತ್ತ ಗುಂಪಿನ ಕೃತ್ಯ ಇಡೀ ಮಾನವತೆಗೇ ಕಳಂಕ ಎನ್ನಬಹುದಾದ ಘಟನೆ. ಇವೆಲ್ಲವೂ ನಡೆಯುತ್ತಿರುವುದು ದೇವತಾ ಪೃಥ್ವಿಯ ಮೇಲೆ. ಆದ್ದರಿಂದ ಸೂಫಿಗಳು ಹೇಳುವಂತೆ ಭೂಮಿಗಿಂತ ಮಿಗಿಲಾದ ಸ್ವರ್ಗ ಯಾವುದಿದೆ! ಎನ್ನುವಂತೆಯೇ, ನೋಯುವವರಿಗೆ ಭೂಮಿಯನ್ನು ಮೀರಿಸುವ ನರಕ ಎಲ್ಲಿದೆ? ಎನಿಸುತ್ತದೆ. ಹಿಂಸೆಗೆ ಕಾಯಂ ಆದ ಅನುಯಾಯಿಗಳಿರುವುದಿಲ್ಲ! ಅವರೆಲ್ಲ ಅಂದಂದಿಗೆ ಹುಟ್ಟಿ ಅಂದಂದಿಗೇ ಸಾಯುವವರು. ಒಂದು ಕಾಲಕ್ಕೆ ಹಿಟ್ಲರ್ ಯಹೂದಿಗಳನ್ನು ವಿಷಾನಿಲ ಕೋಣೆಗಳಿಗೆ ನೂಕಿ ಪಶುಗಳಂತೆ ಕೊಂದು, ಭೂಮಿಯ ಮೇಲೆ ಕ್ರೌರ್ಯ ಹೇಗಿರುತ್ತದೆಂದು ಜಗತ್ತಿಗೆ ತೋರಿಸಿದ. ಇಂತಹ ದ್ವೇಷದ ಉರಿಯಲ್ಲಿ ಬೆಂದ ಯಹೂದಿಗಳು ಜಗತ್ತಿಗೆ ದ್ವೇಷ, ಹಿಂಸೆಯ ಬಗ್ಗೆ ಪಾಠ ಹೇಳಿ, ಜಗತ್ತಿನ ಶಾಂತಿಯ ದೂತರಾಗಬೇಕಿತ್ತು! ಆದರೆ ಈಗ ಅದೇ ಯಹೂದಿಗಳು ಗಾಜಾಪಟ್ಟಿಯ ಮೇಲೆ ದಿನನಿತ್ಯ ಎರಗಿ ಮುಸ್ಲಿಂರನ್ನು ನಿರ್ಭಾವುಕರಾಗಿ ಕೊಲ್ಲುತ್ತಿರುವುದನ್ನು ನೋಡಿದ ಇಡೀ ಜಗತ್ತು ಯಹೂದಿಗಳ ಸಿನಿಕತೆ ಮತ್ತು ಮೃಗೀಯತೆಯನ್ನು ಕಂಡು ಬೆಚ್ಚಿಬಿದ್ದಿದೆ. ತಾವು ಹಿಟ್ಲರ್‌ನಿಂದಾಗಿ ಅನುಭವಿಸಿದ ಹಿಂಸೆಯಿಂದ ಯಹೂದಿಗಳು ಪಾಠ ಕಲಿತಿಲ್ಲ! ಆದ್ದರಿಂದಲೇ ಹಿಂಸೆ ಜಗತ್ತಿನ ಭೂಪಟದ ಮೇಲೆ ಇಂದಿಗೂ ರಕ್ತವನ್ನು ಚೆಲ್ಲುತ್ತಲೇ ಇದೆ.

ಸತ್ಯಕ್ಕೆ ನೂರಾರು ದಾರಿಗಳಿರುವಂತೆ, ಹಿಂಸೆಗೂ ನೂರಾರು ದಾರಿಗಳಿವೆ. ಸತ್ಯದ ದಾರಿಯಲ್ಲಿ ಸಾಗಲು ನಾವು ಅನೇಕ ಗುಣಗಳನ್ನು ಪಡೆದುಕೊಂಡು; ಕೆಲವನ್ನು ತ್ಯಜಿಸಬೇಕಾಗುತ್ತದೆ. ಆದರೆ ಹಿಂಸೆಯ ದಾರಿಯಲ್ಲಿ ಸಾಗಲು ಕೇವಲ ಸೈತಾನನ ನೆರವು ಸಾಕು! ಸಾವು–ನೋವಿನ ಸುಂಕ ಕಟ್ಟಿ ಹಿಂಸೆಯ ದಾರಿಯಲ್ಲಿ ನಡೆಯಬಹುದು! ‘ಹಿಂಸೆಯನ್ನು ಯಾರೂ ಎರಡನೆಯ ಸಲ ಆರಂಭಿಸುವುದಿಲ್ಲ!’ ಎನ್ನುತ್ತಾರೆ. ಅಂತಿಮವಾಗಿ ಮನುಷ್ಯನಿಗೆ ಹಿಂಸೆ ಒಳಗೆ ಇರುವಂಥದ್ದೋ ಅಥವಾ ಹೊರಗಿನಿಂದ ಬಂದದ್ದೋ ಎನ್ನುವ ಪ್ರಶ್ನೆಗೆ ಹೊಳಹನ್ನು ನೀಡುವಂತಿದೆ. ಒಟ್ಟಾರೆ ‘ಹಿಂಸೆ’ ಒಳಗಿರಲಿ, ಹೊರಗಿರಲಿ ಇದು ವ್ಯಕ್ತಿಯ ವಿನಾಶದಿಂದ ಆರಂಭವಾಗಿ ಕೊನೆಗೆ ಸೌಹಾರ್ದತೆ, ಶಾಂತಿ ಹಾಗೂ ಸಾಮರಸ್ಯದ ಸಮಾಜವನ್ನು ಪತನಗೊಳಿಸಲು ಪಣ ತೊಟ್ಟಿರುತ್ತದೆ. ಇಂತಹ ವಿನಾಶದ ಮನಸ್ಥಿತಿಯನ್ನು ಹೋಗಲಾಡಿಸಲು ದೇವರಿಗೂ ಸಾಧ್ಯವಾಗಿಲ್ಲ ಎನ್ನುವುದಾದರೆ, ಮೂಲವನ್ನು ತಿಳಿದು ಇದರ ನಿವಾರಣೆಗಾಗಿ ಮನೋವಿಶ್ಲೇಷಣಾಕಾರರನ್ನು ಮೊರೆಹೋಗುವುದು ಲೇಸೇನೊ!

‘ಒಬ್ಬನನ್ನು ಅರಿಯದೇ ಅವನನ್ನು ಗೌರವಿಸುವುದು ಸಾಧ್ಯವಿಲ್ಲ’ ಎಂದು ಹೇಳಲು ಸಾಧ್ಯವಾಗಬಹುದಾದರೆ, ‘ಒಬ್ಬನನ್ನು ಅರಿಯದೇ ಅವನನ್ನು ಹಿಂಸಿಸಲು ಸಾಧ್ಯ’ ಎಂದೂ ಹೇಳಬಹುದು! ಭಾರತದಲ್ಲಿ ಇಂದು ನಿರ್ದಿಷ್ಟ ಸಮುದಾಯಗಳನ್ನು ಗುರಿಯಾಗಿಟ್ಟುಕೊಂಡು ನಡೆಯುತ್ತಿರುವ ಗುಂಪು ಹಲ್ಲೆಗಳು ಇದನ್ನೇ ಹೇಳುತ್ತವೆ. ಇಂತಹ ಸೂಕ್ಷ್ಮಗಳನ್ನು ಅರಿಯಲು ಹಿಂಸೆ, ಅಧಿಕಾರ ಮತ್ತು ಜಾತಿ ವ್ಯವಸ್ಥೆಯ ನಡುವೆ ಇರುವ ಅಂತರ್ ಸಂಬಂಧವನ್ನು ಇನ್ನಷ್ಟು ಒಳಹೊಕ್ಕು ನೋಡಬೇಕಿದೆ. ಇಡೀ ಸಮಾಜ ಸಮಯ ಸಿಕ್ಕಾಗಲೆಲ್ಲಾ ವೇದಿಕೆಗಳ ಮೇಲೆ ಹೂಮಳೆಗರೆದು ಬುದ್ಧ, ಬಸವ, ಅಂಬೇಡ್ಕರ್, ಕುವೆಂಪು ಎಂದು ಪ್ರಶಂಸೆಯ ಗುಣಗಾನ ಮಾಡುತ್ತದೆ. ಆದರೆ ಅವರು ಹೇಳಿದ ಆದರ್ಶಗಳನ್ನು ಅನುಸರಿಸುವ ಸಂದರ್ಭ ಬಂದಲ್ಲಿ ಮುಖ ತಿರುಗಿಸಿಕೊಂಡು ಮೌನವಾಗುತ್ತದೆ. ಅಂದರೆ ಸಮಾಜ ಆದರ್ಶಗಳನ್ನು ಕೇವಲ ವಾಚ್ಯವಾಗಿ ಮಾತ್ರ ಸ್ವೀಕರಿಸುತ್ತದೆ! ವಾಚ್ಯದ ಮೊರೆಹೋಗುವ ಸಮಾಜದ ಪತನ ಇರುವುದು ಇಲ್ಲಿಯೆ! ಇಡೀ ಜಗತ್ತಿನ ಮಾನವ ಪ್ರಜ್ಞೆಯೊಳಗೆ ಈ ಇಬ್ಬಂದಿತನದ ದ್ವಂದ್ವ ನಡೆಯುತ್ತಲೇ ಇದೆ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಜಗತ್ತಿನಲ್ಲಿ ಆನಂದ ಕೊಡುವ ಶಕ್ತಿಯೇ ಕಲೆ.
  —ರವೀಂದ್ರನಾಥ್ ಟ್ಯಾಗೋರ್
- ಅಧಿಕಾರವಿದ್ದಷ್ಟೂ ಬಂಧನವು ಹೆಚ್ಚು, ಭಯವೂ ಹೆಚ್ಚು. ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸುವುದು ಮಹಾಪಾಪ.
  —ಸ್ವಾಮಿ ವಿವೇಕಾನಂದ
- ಅನ್ನ ದೇವರು ಮಾತ್ರ ಇನ್ನೂ ಬರಲಿಲ್ಲ, ಇನ್ನೂ ಬರಲಿಲ್ಲ.
  —ದ.ರಾ. ಬೇಂದ್ರೆ
- ಹಳೆಯ ಸ್ನೇಹಿತನಿಗಿಂತ ಉತ್ತಮವಾದ ಕನ್ನಡಿ ಬೇರೆ ಇಲ್ಲ.
  —ಥಾಮಸ್ ಫುಲ್ಲರ್
- ಲೋಕದಲ್ಲಿ ಇರುವುದು ಎರಡು ಜಾತಿ; ದುಡ್ಡಿದ್ದವರು, ದುಡ್ಡಿಲ್ಲದವರು.
  —ನಾಣ್ನುಡಿ
- ವ್ಯಾವಹಾರಿಕ ವಿಷಯದಲ್ಲಿ ಸ್ತ್ರೀ ಸ್ಥಿರವಾಗಿರಲ್ಲ.
  —ಜಾನ್‌ಸನ್
- ಅನುಭವ ಜ್ಞಾನವನ್ನು ಮೀರಿದ ಜ್ಞಾನವಿಲ್ಲ.
  —ಈಸೋಪ
- ಶಾಂತ ಸ್ವಭಾವದವರಾದ ಮಹಿಳೆಯರು ಹಿಂಸಾಚಾರಕ್ಕಿಳಿಯಲು ಸಾಧ್ಯವೇ ಇಲ್ಲ.
  —ರಾಮಮನೋಹರ ಲೋಹಿಯಾ
- ಪರರ ಏಳಿಗೆಯ ಬಗ್ಗೆ ನಾವು ಹೊಟ್ಟೆಕಿಚ್ಚುಪಡುವುದು ಮಹಾ ಅಪರಾಧವೇ ಸರಿ.
  —ಜಾನ್ ರಸ್ಕಿನ್